**ಕರ್ನಾಟಕ ಸರ್ಕಾರ**

ಸಂಖ್ಯೆ:ಪಿಯು/187/ಸಿಬ್ಬಂದಿ/ಸಿಆರ್-3/ಉ.ನೇ/2015-16/2

ನಿರ್ದೇಶಕರ ಕಚೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು – 560 012.
ದಿನಾಂಕ: 26/11/2020.

**ಅಧಿಕೃತ ಜ್ಞಾಪನ**

**ವಿಷಯ:-** ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸುವ ಬಗ್ಗೆ.

**ಉಲ್ಲೇಖ:-**

1. ಕರ್ನಾಟಕ ನಾಗರೀಕ ಸೇವೆ (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು, 2013. ದಿನಾಂಕ: 15/05/2014.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ಇವರ ಅಧಿಸೂಚನೆ ಸಂಖ್ಯೆ: ED/KEA/ADMN/CR-54/2014-15, ದಿನಾಂಕ: 08/05/2015, 13/06/2016.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ಇವರ ಅಧಿಸೂಚನೆ ಸಂಖ್ಯೆ: ED/KEA/ADMN/CR-54/2016-17, ದಿನಾಂಕ: 03/06/2017.
4. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ಇವರ ಪತ್ರ ಸಂಖ್ಯೆ: ED/KEA/ADMN/CR-54/2014-15, ದಿನಾಂಕ: 24/10/2019, 28/10/2019 ಹಾಗೂ 21/12/2019.
5. ಈ ಕಚೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆಯ ದಿನಾಂಕ: 20/11/2020.

*****

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿದ್ದ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ರವರು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಉಲ್ಲೇಖ-4ರ ಪತ್ರಗಳಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಕಳುಹಿಸಿದೆ. ಸದರಿ ಪಟ್ಟಿಯಲ್ಲಿರುವ ಅರ್ಹ ಅಭ್ಯರ್ಥಿಗಳಿಗೆ ಉಪನ್ಯಾಸಕರಾಗಿ ನೇಮಕ ಮಾಡುವ ಮುನ್ನ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ದಿನಾಂಕ: 11/08/2020 ರಿಂದ 03/09/2020ರ ವರೆಗೆ ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.

ಉಲ್ಲೇಖ-5ರ ಅನುಬಂಧ-2ರ ಪಟ್ಟಿಯಲ್ಲಿ [ORDER KEPT IN ABEYANCE SUBJECT TO VERIFICATION] ಹೆಸರಿಸಿರುವ ಅಭ್ಯರ್ಥಿಗಳ ಪೈಕಿ ನೈಜತೆ ಪ್ರಮಾಣ ಪತ್ರ ಸ್ವೀಕೃತವಾದ ಅರ್ಹ ಅಭ್ಯರ್ಥಿಗಳ ಪಟ್ಟಿ ಈ ಅಧಿಕೃತ ಜ್ಞಾಪನಕ್ಕೆ ಲಗತ್ತಿಸಿರುವ **ಅನುಬಂಧ-3**ದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವೇತನ ಶ್ರೇಣಿ ರೂ.43,100-83,900 ರಲ್ಲಿ ಉಪನ್ಯಾಸಕರ ಹುದ್ದೆಗೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ನೇಮಿಸಿ, ಅವರ ಹೆಸರಿನ ಮುಂದೆ ನಮೂದಿಸಿರುವ ಕಾಲೇಜಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ. ಸ್ಥಳ ನಿಯುಕ್ತಿಯನ್ನು ಮಾರ್ಪಾಡು ಮಾಡಲು ಅವಕಾಶವಿರುವುದಿಲ್ಲ.

**ಷರತ್ತು ಹಾಗೂ ನಿಬಂಧನೆಗಳು:-**

1. ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಪರೀಕ್ಷಾರ್ಥಿ ಉಪನ್ಯಾಸಕರಾಗಿರುತ್ತಾರೆ.
2. ಈ ಅಭ್ಯರ್ಥಿಗಳ ನೇಮಕಾತಿಯು ತಾತ್ಕಾಲಿಕವಾಗಿದ್ದು, 1977ರ ಕರ್ನಾಟಕ ನಾಗರಿಕ ಸೇವಾ (ಪರಿವೀಕ್ಷಣಾ) ನಿಯಮಗಳು ಹಾಗೂ ಕಾಲ ಕಾಲಕ್ಕೆ ಜಾರಿಯಲ್ಲಿರುವ ಸೇವಾ ಷರತ್ತುಗಳ ನಿಯಮ / ಆದೇಶಗಳ ಅಧೀನಕ್ಕೆ ಒಳಪಟ್ಟಿರುತ್ತದೆ.
3. ಪರಿವೀಕ್ಷಣಾ ಅವಧಿಯಲ್ಲಿ 1974ರ ಕರ್ನಾಟಕ ನಾಗರಿಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಾವಳಿಗಳಲ್ಲಿ ನಿಗಧಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು.
4. ಕರ್ನಾಟಕ ನಾಗರಿಕ ಸೇವಾ (ಜೇಷ್ಠತಾ) ನಿಯಮಗಳು, 1957ರ ನಿಯಮ (4) (ಎ) ರ ಪ್ರಕಾರ ನೇಮಕಾತಿ ಹೊಂದಿದ ಅಭ್ಯರ್ಥಿಗಳ ಜೇಷ್ಠತೆಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರಕಟಿಸಿರುವ ಅಂತಿಮ ಅರ್ಹತಾ ಆಯ್ಕೆ ಪಟ್ಟಿಯನ್ನು ಕಾಯ್ದುಕೊಳ್ಳಲಾಗುವುದು.
5. ಉಪನ್ಯಾಸಕರಾಗಿ ನೇಮಕಗೊಂಡ ಅಭ್ಯರ್ಥಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ನೀಡಲಾಗುವ ವೃತ್ತಿ ಬುನಾದಿ ತರಬೇತಿಗಳಿಗೆ ಕಡ್ಡಾಯವಾಗಿ (ರಜಾ ಅವಧಿಯಾಗಿದ್ದರೂ ಸಹ) ಹಾಜರಾಗತಕ್ಕದ್ದು. ತರಬೇತಿಗೆ ಹಾಜರಾಗದವರ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸಲಾಗುವುದಿಲ್ಲ.
6. ಈ ಅಭ್ಯರ್ಥಿಗಳ ನೇಮಕಾತಿಯು ನ್ಯಾಯಾಲಯದ ತಕರಾರುಗಳಲ್ಲಿ ನ್ಯಾಯಾಲಯಗಳು ನೀಡಲಿರುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಮತ್ತು ಎಲ್ಲಾ ಅಭ್ಯರ್ಥಿಗಳ ನೇಮಕಾತಿಯು ಭಾರತದ ಸರ್ವೋಚ್ಚ ನ್ಯಾಯಾಲದಲ್ಲಿನ ರಿಟ್ ಅರ್ಜಿ (ಸಿವಿಲ್) ಸಂಖ್ಯೆ 232/99ರ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.
7. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ 52722/2019 ಹಾಗೂ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:4294-4354/2019 ಮತ್ತು 43/2020ರ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರತಕ್ಕದ್ದು.
8. ಈ ನೇಮಕಾತಿ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯ/ಕೆ.ಎಸ್.ಎ.ಟಿ ಯಲ್ಲಿ ದಾಖಲಾಗಿರುವ /ದಾಖಲಾಗಲಿರುವ ರಿಟ್ ಪಿಟಿಷನ್/ಅರ್ಜಿಗಳ ಅಂತಿಮ ತೀರ್ಪಿಗೆ ಬದ್ಧವಾಗಿರತಕ್ಕದ್ದು.
9. ಈ ನೇಮಕಾತಿಗೆ ಸಂಬಂಧಿಸಿದಂತೆ, ನೇಮಕಾತಿಯ ನಂತರ ಅಭ್ಯರ್ಥಿಯು ಯಾವುದೇ ತಪ್ಪು ಮಾಹಿತಿ ನೀಡಿದ್ದು ಭವಿಷ್ಯದಲ್ಲಿ ಕಂಡುಬಂದಲ್ಲಿ / ಮಾಹಿತಿಯನ್ನು ಮುಚ್ಚಿಟ್ಟು ಸೇವೆಗೆ ಸೇರಿದಲ್ಲಿ ಅಥವಾ ದಾಖಲೆಗಳು ದೋಷಪೂರಿತವಾಗಿರುವುದು ಕಂಡುಬಂದಲ್ಲಿ ಈ ನೇಮಕಾತಿಯನ್ನು ರದ್ದುಗೊಳಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರ ಕಾಯ್ದಿರಿಸಿಕೊಂಡಿದೆ.
10. ಮೀಸಲಾತಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ಯಾವುದೇ ನ್ಯಾಯಾಲಯ/ ಪ್ರಾಧಿಕಾರದಲ್ಲಿ ದಾಖಲಾಗಿದ್ದಲ್ಲಿ ಅಥವಾ ದಾಖಲಾದಲ್ಲಿ ಅಂತಹ ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳ ಆಯ್ಕೆಯು ಪರಿಷ್ಕರಣೆಗೆ ಒಳಪಟ್ಟಿರುತ್ತದೆ.
11. ಸ್ಥಳ ನಿಯುಕ್ತಿಗೊಳಿಸಿರುವ ಕಾಲೇಜಿನಲ್ಲಿ ಕನಿಷ್ಠ 03 ವರ್ಷಗಳ ಕಾಲ ಕಾರ್ಯ ನಿರ್ವಹಿಸತಕ್ಕದ್ದು. 03 ವರ್ಷಗಳಿಗೆ ಮೊದಲೇ ವರ್ಗಾವಣೆ ಕೋರುವಂತಿಲ್ಲ ಹಾಗೂ ಒಂದು ವೇಳೆ ವರ್ಗಾವಣೆಗೆ ಅಥವಾ ಸ್ಥಳ ಬದಲಾವಣೆಗೆ ಯಾವುದೇ ಬಾಹ್ಯ ಒತ್ತಡವನ್ನು ತರುವುದನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966 ರ ನಿಯಮ (26) ರ ಪ್ರಕಾರ ನಿಷೇಧಿಸಲಾಗಿದೆ.
12. ದಿನಾಂಕ: 07/12/2020 ರಿಂದ 15 ದಿನಗಳೊಳಗಾಗಿ ಅಭ್ಯರ್ಥಿಗಳು ಸ್ಥಳ ಆಯ್ಕೆಗೊಂಡ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನೇಮಕಾತಿ ಆದೇಶ ತಂತಾನೆ ರದ್ದುಗೊಳ್ಳುತ್ತದೆ. ದಿನಾಂಕ: 07/12/2020 ರ ಮುಂಚೆ ಅಥವಾ ನಿಗದಿತ ದಿನಾಂಕದ ನಂತರ ಬಂದಲ್ಲಿ ಕಾಲೇಜಿನ ಪ್ರಾಚಾರ್ಯರು ಇವರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಬಾರದು.

13. ಅಭ್ಯರ್ಥಿಯ ನೇಮಕಾತಿಯಾಗಿರುವ ಹುದ್ದೆಯು ಪಿಂಚಣಿ ರಹಿತ ಹುದ್ದೆಯಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಹೆಚ್) 04 ಪಿಇಟಿ 2005, ದಿನಾಂಕ: 31/03/2006 ರನ್ವಯ *NEWLY DEFINED CONTRIBUTORY PENSION SCHEME* ಗೆ ಒಳಪಡುತ್ತಾರೆ.
14. ಆಯ್ಕೆಯಾದ ಉಪನ್ಯಾಸಕರನ್ನು ಕರ್ತವ್ಯಕ್ಕೆ ತೆಗೆದುಕೊಳ್ಳುವಾಗ ಪ್ರಾಚಾರ್ಯರು ಮೇಲ್ಕಂಡ ಷರತ್ತು ಹಾಗೂ ನಿಬಂಧನೆಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
15. ಮೀಸಲಾತಿ ವರ್ಗದಲ್ಲಿ ನೇಮಕಾತಿಗೊಂಡಿರುವ ಉಪನ್ಯಾಸಕರ ಸಿಂಧುತ್ವ ಪ್ರಮಾಣ ಪತ್ರಗಳ ದೃಢೀಕರಿಸಿದ ಘೋಟೋ ಪ್ರತಿಯನ್ನು ಈ ಕಚೇರಿಯಿಂದ ಕಳುಹಿಸಿದ ನಂತರ ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸಿ ಲಗತ್ತಿಸುವುದು.
16. ನಿಗದಿತ ಘೋಷಣಾ ಪತ್ರದಲ್ಲಿ ಲಿಖಿತವಾಗಿ ನಿಷ್ಠಾ ಶಪಥ / ಪ್ರತಿಜ್ಞೆ ಸಲ್ಲಿಸಬೇಕು.
17. ಕರ್ತವ್ಯಕ್ಕೆ ಹಾಜರಾದ ಬಗ್ಗೆ ವರದಿಯನ್ನು ನೇಮಕಾತಿ ಆದೇಶದಲ್ಲಿನ ಕ್ರಮ ಸಂಖ್ಯೆ ನಮೂದಿಸಿ ಸಲ್ಲಿಸಿ, ನೇಮಕಾತಿ ಪ್ರಾಧಿಕಾರದಿಂದ ಪ್ರಥಮ ವೇತನ ಬಿಡುಗಡೆಯ ಪ್ರಮಾಣ ಪತ್ರವನ್ನು ಪಡೆದ ನಂತರವೇ ವೇತನ ಪಾವತಿಸುವುದು.
18. ಕರ್ನಾಟಕ ಸಿವಿಲ್ ಸೇವೆಗಳು (ಗಣಕ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012 ರ ನಿಯಮ (12) ರ ಪ್ರಕಾರ ಗಣಕ ಸಾಕ್ಷರತಾ ಪರೀಕ್ಷೆ ಉತ್ತೀರ್ಣರಾಗತಕ್ಕದ್ದು.
19. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 76 ಸೇನೆನಿ 2018, ದಿನಾಂಕ: 15/02/2018 ರ ಪ್ರಕಾರ ಉಪನ್ಯಾಸಕರ ಹುದ್ದೆಗೆ ಆಯ್ಕೆಗೊಂಡ *ಅಭ್ಯರ್ಥಿಗಳ ನಡತೆ ಮತ್ತು ಪೂರ್ವ ಚರಿತ್ರೆಯ ಕುರಿತು ಪೋಲೀಸ್ ವರದಿ, ಶಾರೀರಿಕ ಸುಸ್ಥಿಯ ಕುರಿತು ವೈದ್ಯಕೀಯ ವರದಿ, ದಿವ್ಯಚೇತನ ಪ್ರಮಾಣ ಪತ್ರ, ಸಮತಳ ಮೀಸಲಾತಿ ಪ್ರಮಾಣ ಪತ್ರಗಳು(ಕನ್ನಡ, ಗ್ರಾಮೀಣ, ಜಾತಿ ಸಿಂಧುತ್ವ ಪ್ರಮಾಣ ಪತ್ರ, ಸ್ವಗ್ರಾಮ ಪ್ರಮಾಣ ಪತ್ರ (ಕಲ್ಯಾಣ ಕರ್ನಾಟಕ),) ಹಾಗೂ ಸೇವಾ ಅರ್ಹತಾ ಪ್ರಮಾಣ ಪತ್ರಗಳು (ಎಸ್.ಎಸ್.ಎಲ್.ಸಿ., ಬಿ.ಇಡಿ ಮತ್ತು ಸ್ನಾತಕೋತ್ತರ ಪದವಿ)* ಮೀಸಲಾತಿಗೆ ಸಂಬಂಧಿಸಿದ ನೈಜತೆ ಪ್ರಮಾಣ ಪತ್ರಗಳ ಮಾಹಿತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಪಡೆದ ನಂತರವೇ ಪ್ರಾಚಾರ್ಯರು ಉಪನ್ಯಾಸಕರಿಗೆ ಪ್ರಥಮ ವೇತನವನ್ನು ಬಿಡುಗಡೆ ಮಾಡತಕ್ಕದ್ದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.
4. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ.
5. ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ.
6. ಸಂಬಂಧಪಟ್ಟ ಅಭ್ಯರ್ಥಿಗಳಿಗೆ – ಅಗತ್ಯ ಕ್ರಮಕ್ಕಾಗಿ.
7. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.